ಒ.ಎಸ್. ನಂ.70/2022
ಪಿಡಬ್ಲು-1

ದಿನಾಂಕ 28.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

ನಾನು 10ನೆ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಇಂಗ್ಲೀಷ ಮತ್ತು ಹಿಂದಿ ಓದಲು ಬರುತ್ತದೆ. ಮಹಾಂತಪ್ಪಗೌಡರವರ ಹೆಸರಿನಲ್ಲಿ 14-ಎಕರೆ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಸದರಿ 14-ಎಕರೆ ಪಿತ್ರಾರ್ಜಿತ ಆಸ್ತಿಯನ್ನು ದಾವೆಯಲ್ಲಿ ಹಾಕಿರುತ್ತೇನೆ. ಮಹಾಂತಪ್ಪಗೌಡರವರಿಗೆ 03-ಜನ ಸಹೋದರರು ಮತ್ತು 02-ಜನ ಸಹೋದರಿಯರು ಇರುತ್ತಾರೆ. ನನ್ನ ತಂದೆಯ 02-ಜನ ಸಹೋದರಿಯರಲ್ಲಿ ಸಿದ್ದಮ್ಮ ಎಂಬುವವಳು 5-6 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. 2ನೆ ಪ್ರತಿವಾದಿಯ ಹೆಸರಿನಲ್ಲಿ ಒಂದು ಪ್ಲಾಟನ್ನು ಖರೀಸಿದಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3ನೆ ಪ್ರತಿವಾದಿಯರ ನಡುವೆ ಈಗಾಗಲೆ ಪಾಲು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಪಾಲು ಆದ ಬಗ್ಗೆ ನಾನು ಪಹಣಿಗಳನ್ನು ಪರಿಶೀಲಿಸಿಲ್ಲ ಎಂದರೆ ಸರಿ.

ಗೌಡಪ್ಪಗೌಡ ತಂದೆ ನಿಂಗಪ್ಪ ಕೈನೂರರವರು ನನ್ನ ಕಾಕ ಆಗುತ್ತಾನೆ. ಕೇಸುರಾಯ ತಂದೆ ಗೌಡಪ್ಪಗೌಡ ನನ್ನ ದೊಡ್ಡಪ್ಪ ಆಗುತ್ತಾನೆ. ಸರ್ವೆ ನಂ.335 ರಲ್ಲಿ 14-ಎಕರೆ 21-ಗುಂಟೆ ಜಮೀನು ಕೇಸುರಾಯನ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.335 ರಲ್ಲಿ 08-ಎಕರೆ ಜಮೀನು 1ನೆ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲುಗಳು 2005 ಕ್ಕಿಂತ ಮುಂಚೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಪಹಣಿಗಳನ್ನು ನಾನೆ ತೆಗೆದುಕೊಂಡು ಬಂದಿರುತ್ತೇನೆ.

ಸರ್ವೆ ನಂ.335 ರಲ್ಲಿ 08-ಎಕರೆ ಜಮೀನನ್ನು 1ನೆ ಪ್ರತಿವಾದಿ ರೂ.1,50,000/-ಗಳಿಗೆ SBI bank ನಲ್ಲಿ ಅಡಮಾನ ಇಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ಯಾರು ಯಾರಿಗೆ ಅಡಮಾನವಿಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಕೇಸುರಾಯ ತೀರಿಕೊಂಡ ಮೇಲೆ ಸರ್ವೆ ನಂ.335 ಕೇಸುರಾಯನ ಹೆಂಡತಿ ಹೆಸರಿಗೆ ಖಾತೆ ಬದಲಾವಣೆಯಾದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನ.335 ನ್ನು ಹೊರತುಪಡಿಸಿ ನನ್ನ ತಂದೆಯ ಹೆಸರಿನಲ್ಲಿ ಬೇರೆ ಜಮೀನುಗಳು ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. 2ನೆ

ಪ್ರತಿವಾದಿಗೆ 1ನೆ ಪ್ರತಿವಾದಿಗೆ 02-ಎಕರೆ ಜಮೀನನ್ನು ನೊಂದಾಯಿತು ವಿಭಾಗ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ.

ಮಹಾಂತಪ್ಪಗೌಡ ಹೆಸರಿಗೆ ಇರುವ ಜಮೀನಿನಲ್ಲಿ KBJNL ರವರು ಭೂ ಸ್ವಾ ದಿನತೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಸರ್ವೆ ನಂ.354/3 ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.354/3 ರಲ್ಲಿ 6-ಎಕರೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.354/3 ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.354/3 ರಲ್ಲಿ 01-ಎಕರೆ 10-ಗುಂಟೆ ಜಮೀನು ಭೂ ಸ್ವಾ ಧೀನ ಮಾಡಿಕೊಂಡ ನಂತರ 05-ಎಕರೆ 19-ಗುಂಟೆ ಜಮೀನು ಉಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.354/3 ರಲ್ಲಿ 05-ಎಕರೆ 19-ಗುಂಟೆ ಜಮೀನು ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.354/3 ರಲ್ಲಿ ಹಿಸ್ಸೆಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. 2021-2022 ರವರೆಗೆ ಸರ್ವೆ ನಂ.354/3 ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ.354/3 ರಲ್ಲಿ ಶಿವಾನಂದ ತಂದೆ ಹಣಮಂತರಾಯರವರಿಗೆ 04-ಎಕರೆ 04-ಗುಂಟೆ ಜಮೀನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.354/3 ರಲ್ಲಿ ಬಸಮ್ಮ ಗಂಡ ಚಂದ್ರಾಮಪ್ಪರವರಿಗೆ 01-ಎಕರೆ 25-ಗುಂಟೆ ಜಮೀನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವಾನಂದ ಮತ್ತು ಬಸಮ್ಮರವರನ್ನು ಈ ದಾವೆಯಲ್ಲಿ ನಾನು ಪಕ್ಷಗಾರರನ್ನಾ ಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

2022 ರಿಂದ 2025 ರವರಗೆ ನನ್ನ ತಂದೆಯ ಹೆಸರಿನಲ್ಲಿರುವ ಪಹಣಿಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಪರಿಶೀಲನೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು 2022 ರಿಂದ 2025 ರವರಗೆ ನನ್ನ ತಂದೆಯ ಹೆಸರಿನಲ್ಲಿರುವ ಪಹಣಿಗಳನ್ನು ಪರಿಶೀಲನೆ ಮಾಡಿದಾಗ ಶಿವಾನಂದ ಮತ್ತು ಬಸಮ್ಮರವರನ್ನು ಈ ದಾವೆಯಲ್ಲಿ ನಾನು ಪಕ್ಷಗಾರರನ್ನಾ ಗಿ ಮಾಡಲು ಏನಾದರೂ ತೊಂದರೆ ಇತ್ತಾ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ದಾಖಲಿಸಲು ಮತ್ತು 1 ಮತ್ತು 2ನೆ ಪ್ರತಿವಾದಿಯರು ನನ್ನನ್ನು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2ನೆ ಪ್ರತಿವಾದಿಯರೆ ಎಲ್ಲಾ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 3ನೆ ಪ್ರತಿವಾದಿಗೆ

ತೊಂದರೆ ಕೊಡುವ ಉದ್ದೇಶದಿಂದ 1 ಮತ್ತು 2ನೆ ಪ್ರತಿವಾದಿಯರ ಮಾತು ಕೇಳಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ಮತ್ತು 2ನೆ ಪ್ರತಿವಾದಿಯರು ತಮ್ಮ ಹೆಸರಿನಲ್ಲಿರುವ ಆಸ್ತಿಗಳನ್ನು ಮಾರಿಕೊಂಡಿದ್ದು 3ನೆ ಪ್ರತಿವಾದಿಯ ದಾವಾ ಆಸ್ತಿ ಹೆಸರಿನಲ್ಲಿದ್ದರಿಂದ 3ನೆ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ